KARNATAKA LOKAYUKTA

No:UPLOK-2/DE/194/2018/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 06.02.2021.

**RECOMMENDATION**

Sub:- Departmental inquiry against: (1) Sri Murthyappa, Assistant Director, Kannada and Culture Department, Hassan, (2) Sri T.C.Manjunath, Second Division Assistant(Retired), Kannada and Culture Department, Hassan, and (3) Sri Kumar, First Division Assistant, Kannada and Culture Department, Hassan- reg.

Ref:- 1) Government Order No. KCI 66 KCN 2017 dated 26.3.2018.

2) Nomination order No. UPLOK-2/DE/194/2018 dated 07.04.2018 of Upalokayukta, State of Karnataka.

3) Inquiry report dated 28.01.2021 of Additional Registrar of Enquiries-14, Karnataka Lokayukta, Bengaluru.

4) Recommendation of even number dt.26.2.2019 in respect of DGO.1(Abatement report).

~~~~~

The Government by its order dated 26.3.2018 initiated the disciplinary proceedings against (1) Sri Murthyappa, Assistant Director, Kannada and Culture Department, Hassan, (2) Sri T.C.Manjunath, Second Division Assistant(Retired), Kannada and
~~~~~

Culture Department, Hassan, and (3) Sri Kumar, First Division Assistant, Kannada and Culture Department, Hassan, [hereinafter referred to as Delinquent Government Officials, for short as 'DGOs 1 to 3' respectively] and entrusted the departmental inquiry to this Institution.

2. This Institution by Nomination Order No. UPLOK-2/DE/194/2018 dated 07.04.2018 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, by order No. Uplok-1&2/DE/Transfers/2018 dated 6.8.2018, Additional Registrar of Enquiries-14, Karnataka Lokayukta, Bengaluru, was re-nominated as the Inquiry Officer to continue the said departmental inquiry against DGOs.

3. The DGOs 1 to 3 were tried for the following charges :-

> "ಅ) 1ನೇ ಆ.ಸ.ನೌ.ರ ಶ್ರೀ.ಮೂರ್ತ್ಯಪ್ಪ ಆದ ನೀವು ಸಹಾಯಕ ನಿರ್ದೇಶಕರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, 2ನೇ ಆ.ಸ.ನೌ.ರ ಶ್ರೀ.ಟಿ.ಸಿ.ಮಂಜುನಾಥ ಆದ ನೀವು ದ್ವಿದ.ಸ.ರಾಗಿ ಕನ್ನಡ ಮತ್ತು ಸಂಸ್ಕೃತಿ

ಇಲಾಖೆ, ಹಾಸನ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹಾಗೂ 3ನೇ ಆ.ಸ.ನೌ.ರ ಶ್ರೀ.ಕುಮಾರ್ ಆದ ನೀವು ಪ್ರ.ದ.ಸ.ರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನಾಂಬ ಕಲಾಕ್ಷೇತ್ರ, ಸಾಲಗಾಮೆ ರಸ್ತೆ, ಹಾಸನ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 1ನೇ ಆ.ಸ.ನೌ.ರರಾದ ನೀವು ವಾದ್ಯಪರಿಕರಗಳನ್ನು ವಿತರಿಸುವ ಸಂಬಂಧ ಆಯಾ ವರ್ಷದ ಅನುದಾನವನ್ನು ಅದೇ ವರ್ಷ ಬಹಿರಂಗವಾಗಿ ಟೆಂಡರ್ ಕರೆದು ಕೆ.ಟಿ.ಪಿ.ಪಿ. ಕಾನೂನಿನ ಅಡಿಯಲ್ಲಿ ಕರ್ತವ್ಯ ನಿರ್ವಹಿಸದೇ ನೇರವಾಗಿ ವಿತರಕರಿಗೆ ಚೆಕ್‌ಗಳನ್ನು ಕೊಟ್ಟು ಕರ್ತವ್ಯಲೋಪ ಎಸಗಿದ್ದೀರಿ.

ಆ) ಮುಂದುವರೆದು, ಒಂದು ಬಾರಿ ರೂ.5,20,000/- ಮತ್ತು ರೂ.1,20,000/- ಗಳು ಅನುದಾನ ರೂಪದಲ್ಲಿ ಬಿಡುಗಡೆಯಾಗಿದ್ದು, ಇಷ್ಟು ದೊಡ್ಡ ಮೊತ್ತದ ಹಣಕ್ಕೆ ಯಾವುದೇ ಟೆಂಡರ್‌ಗಳನ್ನು ಕರೆಯದೇ ವಾದ್ಯಪರಿಕರಗಳನ್ನು ನೇರವಾಗಿ ಖರೀದಿಸಿ 1ನೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿದ್ದೀರಿ.

ಇ) ಮುಂದುವರೆದು, ಯಾವ ವಾದ್ಯ ಪರಿಕರಗಳನ್ನು ಎಷ್ಟು ಹಣಕ್ಕೆ ಖರೀದಿಸಲಾಗಿದೆ, ಯಾವ ವಾದ್ಯ ಪರಿಕರಗಳ ಸಂಸ್ಥೆಗೆ ಎಷ್ಟು ಹಣವನ್ನು ಚೆಕ್ ಮೂಲಕ ಕೊಡಲಾಗಿದೆ, ಅವರಿಂದ ವಾದ್ಯಗಳನ್ನು ಯಾವ ದಿನಾಂಕದಂದು ಖರೀದಿಸಲಾಗಿದೆ ಎಂಬ ಬಗ್ಗೆ ವಿವರಗಳನ್ನು ನೀಡದೇ 1 ರಿಂದ 3ನೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿದ್ದೀರಿ.

ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ."

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO.2 Sri T.C.Manjunath, Second Division Assistant(now Retired), Kannada and Culture Department, Hassan, and DGO 3 Sri Kumar, First Division Assistant, Kannada and Culture Department, Hassan, is '***not proved***'.

5. Further, the Inquiry Officer (Additional Registrar of Enquiries- 14) has already recorded *abatement of enquiry* as against DGO.1 Sri Murthyappa, and recommendation in this regard is already sent vide Ref.(4) above.

6. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and exonerate DGO.2 Sri T.C.Manjunath, Second Division Assistant(Retired), Kannada and Culture Department, Hassan, and DGO -3 Sri Kumar, First Division Assistant, Kannada and Culture Department, Hassan, of the charges leveled against them.

7. Action taken in the matter shall be intimated to this Authority.

Connected records are enclosed herewith.

5/2/21

(JUSTICE B.S.PATIL)
Upalokayukta,
State of Karnataka.

*BS**

# <u>ಕರ್ನಾಟಕ ಲೋಕಾಯುಕ್ತ</u>

ನಂ.ಉಪಲೋಕ್–2/ಡಿಇ–194/2018/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 27/01/2021.

## ವಿಚಾರಣಾ ವರದಿ

<u>**ಉಪಸ್ಥಿತರು:**</u> **ಕೆ.ಭಾಗ್ಯ,** ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ – (1) **ಶ್ರೀ. ಮೂರ್ತ್ಯಪ್ಪ,** ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ (2) **ಶ್ರೀ. ಟಿ.ಸಿ ಮಂಜುನಾಥ,** ನಿವೃತ್ತ ದ್ವಿದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ಹಾಲಿ ವಾಸ ಚಿಕ್ಕಕೊಂಡಗುಳ, ತೇಜೂರು ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಮತ್ತು (3) **ಶ್ರೀ. ಕುಮಾರ್,** ಪ್ರ.ದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನಾಂಬ ಕಲಾಕ್ಷೇತ್ರ, ಸಾಲಗಾಮೆ ರಸ್ತೆ, ಹಾಸನ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/8808/2016/ಡಿಆರ್ಇ–5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 22/09/2017.
2. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 66 ಕಸನಿ 2017, ಬೆಂಗಳೂರು, ದಿನಾಂಕ: 26/03/2018.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/194/2018, ಬೆಂಗಳೂರು ದಿನಾಂಕ: 07/04/2018.
4. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ವೈ.ಎಸ್ ಶಾಂತಕುಮಾರ** ಬಿನ್ ಲೇಟ್ ಸಿದ್ದರಾಮೇಗೌಡ, ರಂಗಭೂಮಿ ಕಲಾವಿಧರು, ನಂ.272, ಮಂಜುನಾಥ ನಿಲಯ, 1ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ಶಾಂತಿನಗರ, ಹಾಸನ ರವರು ಆಪಾದಿತ ಸರ್ಕಾರಿ ನೌಕರ **(1) ಶ್ರೀ. ಮೂರ್ತ್ಯಪ್ಪ,** ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ **(2) ಶ್ರೀ. ಟಿ.ಸಿ ಮಂಜುನಾಥ,** ನಿವೃತ್ತ ದ್ವಿದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ಹಾಲಿ ವಾಸ ಚಿಕ್ಕಕೊಂಡಗುಳ, ತೇಜೂರು ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಮತ್ತು **(3) ಶ್ರೀ. ಕುಮಾರ್,** ಪ್ರ.ದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನಾಂಬ ಕಲಾಕ್ಷೇತ್ರ, ಸಾಲಗಾಮೆ ರಸ್ತೆ, ಹಾಸನ ರವರ ವಿರುದ್ಧ ಸಲ್ಲಿಸಿ, ಸದರಿಯವರು 2012-13, 2013-14, 2014-15 ಹಾಗೂ 2015-16ರ ಅವಧಿಗಳಿಗೆ ಸರ್ಕಾರವು ಕಲಾವಿಧರಿಗೆ ಅನುಕೂಲವಾಗಲೆಂದು ಬಿಡುಗಡೆ ಮಾಡಿರುವ ಲಕ್ಷಾಂತರ ಹಣವನ್ನು ಹಾಗೆಯೇ ಇಟ್ಟುಕೊಂಡಿದ್ದು, ಕಲಾವಿಧರಿಗೆ ವಾದ್ಯ ಪರಿಕರಗಳನ್ನು ವಿತರಣೆ ಮಾಡದೇ ದುರುಪಯೋಗಪಡಿಸಿಕೊಂಡಿದ್ದು, ಅನೇಕ ಭಾರಿ ಕೇಳಿಕೊಂಡರೂ ಸಹ, ಕಛೇರಿಯ ಮುಂದೆ ಪ್ರತಿಭಟನೆ ಮಾಡಿದರೂ ಸಹ, ವಾದ್ಯ ಪರಿಕರಗಳನ್ನು ವಿತರಣೆ ಮಾಡಿರುವುದಿಲ್ಲ. ಆದ್ದರಿಂದ, ಸದರಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದಿನಾಂಕ: 11/05/2016 ರಂದು ಈ ಸಂಸ್ಥೆಗೆ ದೂರು ದಾಖಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 26/03/2018ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 07/04/2018 ರಂದು ಅಪರ ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರುಗಳ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-7 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ: 27/06/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ-1**

**ದೋಷಾರೋಪಣೆ**

"ಅ) 1ನೇ ಆ.ಸ.ನೌ.ರ ಶ್ರೀ.ಮೂರ್ತ್ಯಪ್ಪ ಆದ ನೀವು ಸಹಾಯಕ ನಿರ್ದೇಶಕರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, 2ನೇ ಆ.ಸ.ನೌ.ರ ಶ್ರೀ.ಟಿ.ಸಿ.ಮಂಜುನಾಥ ಆದ ನೀವು ದ್ವಿ.ದ.ಸ.ರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹಾಗೂ 3ನೇ ಆ.ಸ.ನೌ.ರ ಶ್ರೀ.ಕುಮಾರ್ ಆದ ನೀವು ಪ್ರ.ದ.ಸ.ರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನಾಂಬ ಕಲಾಕ್ಷೇತ್ರ, ಸಾಲಗಾಮೆ ರಸ್ತೆ, ಹಾಸನ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 1ನೇ ಆ.ಸ.ನೌ.ರರಾದ ನೀವು ವಾದ್ಯಪರಿಕರಗಳನ್ನು ವಿತರಿಸುವ ಸಂಬಂಧ ಆಯಾ ವರ್ಷದ ಅನುದಾನವನ್ನು ಅದೇ ವರ್ಷ ಬಹಿರಂಗವಾಗಿ ಟೆಂಡರ್ ಕರೆದು ಕೆ.ಟಿ.ಪಿ.ಪಿ. ಕಾನೂನಿನ ಅಡಿಯಲ್ಲಿ ಕರ್ತವ್ಯ ನಿರ್ವಹಿಸದೇ ನೇರವಾಗಿ ವಿತರಕರಿಗೆ ಚೆಕ್‌ಗಳನ್ನು ಕೊಟ್ಟು ಕರ್ತವ್ಯಲೋಪ ಎಸಗಿದ್ದೀರಿ.

ಆ) ಮುಂದುವರೆದು, ಒಂದು ಬಾರಿ ರೂ.5,20,000/- ಮತ್ತು ರೂ.1,20,000/- ಗಳು ಅನುದಾನ ರೂಪದಲ್ಲಿ ಬಿಡುಗಡೆಯಾಗಿದ್ದು, ಇಷ್ಟು ದೊಡ್ಡ ಮೊತ್ತದ ಹಣಕ್ಕೆ ಯಾವುದೇ ಟೆಂಡರ್‌ಗಳನ್ನು ಕರೆಯದೇ ವಾದ್ಯಪರಿಕರಗಳನ್ನು ನೇರವಾಗಿ ಖರೀದಿಸಿ 1ನೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿದ್ದೀರಿ.

ಇ) ಮುಂದುವರೆದು, ಯಾವ ವಾದ್ಯ ಪರಿಕರಗಳನ್ನು ಎಷ್ಟು ಹಣಕ್ಕೆ ಖರೀದಿಸಲಾಗಿದೆ, ಯಾವ ವಾದ್ಯ ಪರಿಕರಗಳ ಸಂಸ್ಥೆಗೆ ಎಷ್ಟು ಹಣವನ್ನು ಚೆಕ್ ಮೂಲಕ ಕೊಡಲಾಗಿದೆ, ಅವರಿಂದ ವಾದ್ಯಗಳನ್ನು ಯಾವ ದಿನಾಂಕದಂದು ಖರೀದಿಸಲಾಗಿದೆ ಎಂಬ ಬಗ್ಗೆ ವಿವರಗಳನ್ನು ನೀಡದೇ 1 ರಿಂದ 3ನೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿದ್ದೀರಿ.

ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ."

## ಅನುಬಂಧ-2

## ದೋಷಾರೋಪಣೆಯ ವಿವರ

(ಕಲಂ 12(3) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಅಡಿಯಲ್ಲಿ ಸಲ್ಲಿಸಿದ ವರದಿಯ ಯಥಾವತ್ತು ವಿವರಣೆಯಾಗಿರುತ್ತದೆ)

ಶ್ರೀ. ವೈ.ಎಸ್.ಶಾಂತಕುಮಾರ ತಂದೆ ಲೇಟ್ ಸಿದ್ದರಾಮೇಗೌಡ, ರಂಗಭೂಮಿ ಕಲಾವಿದರು, ನಂ.272, ಮಂಜುನಾಥ ನಿಲಯ, 1ನೇ ಮುಖ್ಯ ರಸ್ತೆ, 2ನೇ ತಿರುವು, ಶಾಂತಿನಗರ, ಹಾಸನ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು 1) ಶ್ರೀ.ಮೂರ್ತ್ಯಪ್ಪ, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ, 2) ಶ್ರೀ.ಟಿ.ಸಿ.ಮಂಜುನಾಥ, ನಿವೃತ್ತ ದ್ವಿದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ಹಾಲಿ ವಾಸ ಚಿಕ್ಕಕೊಂಡಗುಳ, ತೇಜೂರು ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಹಾಗೂ 3) ಶ್ರೀ.ಕುಮಾರ್, ಪ್ರ.ದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನಾಂಬ ಕಲಾಕ್ಷೇತ್ರ, ಸಾಲಗಾಮೆ ರಸ್ತೆ, ಹಾಸನ ರವರುಗಳ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

**ಪ್ರಕರಣದ ಸಂಕ್ಷಿಪ್ತ ಸಾರಾಂಶ:-** ದೂರುದಾರರು ತಮ್ಮ ದೂರಿನಲ್ಲಿ ಆ.ಸ.ನೌ.ರರು 2012-13, 2013-14, 2014-15 ಹಾಗೂ 2015-16ರ ಅವಧಿಗಳಿಗೆ ಸರ್ಕಾರವು ಕಲಾವಿಧರಿಗೆ ಅನುಕೂಲವಾಗಲೆಂದು ಬಿಡುಗಡೆ ಮಾಡಿರುವ ಲಕ್ಷಾಂತರ ಹಣವನ್ನು ಹಾಗೆಯೇ ಇಟ್ಟುಕೊಂಡಿದ್ದು, ಕಲಾವಿದರಿಗೆ ವಾದ್ಯಪರಿಕರಗಳನ್ನು ವಿತರಣೆ ಮಾಡದೆ ದುರುಪಯೋಗ ಪಡಿಸಿಕೊಂಡಿದ್ದು, ಅನೇಕ ಬಾರಿ ಕೇಳಿಕೊಂಡರೂ ಸಹ ಹಾಗೂ ಕಛೇರಿಯ ಮುಂದೆ ಪ್ರತಿಭಟನೆ ಮಾಡಿದರೂ ವಾದ್ಯಪರಿಕರಗಳನ್ನು ವಿತರಣೆ ಮಾಡಿಲ್ಲ. ಆದ್ದರಿಂದ, ಆ.ಸ.ನೌ.ರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದರು.

ದೂರಿನ ಮೇಲೆ 1 ರಿಂದ 3ನೇ ಆ.ಸ.ನೌ.ರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1ನೇ ಆ.ಸ.ನೌ.ರರು ತಮ್ಮ ಆಕ್ಷೇಪಣೆಯಲ್ಲಿ 2012-13 ಮತ್ತು 2013-14ನೇ ಸಾಲಿನಲ್ಲಿ 5,20,000/- ರೂ.ಗಳಿಗೆ ಎಸ್.ಸಿ.ಪಿ ಕಲಾ ತಂಡಗಳಿಗೆ ವಾದ್ಯಪರಿಕರಗಳನ್ನು ವಿತರಿಸಲು ಹಣ ಬಿಡುಗಡೆಯಾಗಿದ್ದು, ಉತ್ತಮ ಗುಣಮಟ್ಟದ ವಾದ್ಯಪರಿಕರಗಳನ್ನು ವಿತರಿಸಲು ಸದರಿ ಸಾಲಿನಲ್ಲಿ ಖಜಾನೆಯ ಚೆಕ್ ಮೂಲಕ ನೇರವಾಗಿ ವಿತರಿಸುವ ಸಂಸ್ಥೆಗೆ ಪಾವತಿಸಲಾಗಿದ್ದು, 2012-13ನೇ ಸಾಲಿನ ಎಸ್.ಟಿ.ಪಿ ಗಿರಿಜನ ಉಪಯೋಜನೆ ಅಡಿಯಲ್ಲಿ 1,20,000/- ರೂ.ಗಳಿಗೆ ಉತ್ತಮ ಗುಣಮಟ್ಟದ ವಾದ್ಯಪರಿಕರಗಳನ್ನು ವಿತರಿಸಲು ಸದರಿ

ಸಾಲಿನಲ್ಲಿ ಖಜಾನೆ ಚೆಕ್ ಮೂಲಕ ನೇರವಾಗಿ ವಿತರಣಾ ಸಂಸ್ಥೆಗೆ ಪಾವತಿಸಲಾಗಿದ್ದು, ಒಟ್ಟು 27 ತಂಡಗಳಿಗೆ ಮತ್ತು ಉಪ ಯೋಜನೆಯಡಿಯಲ್ಲಿ 7 ತಂಡಗಳಿಗೆ ವಾದ್ಯಪರಿಕರಗಳನ್ನು ವಿತರಣೆ ಮಾಡಲಾಗಿದೆ. ಉತ್ತಮ ರೀತಿಯ ಮತ್ತು ಗುಣಮಟ್ಟದ ವಾದ್ಯಪರಿಕರಗಳನ್ನು ವಿತರಿಸಲು ಆದೇಶ ಇದ್ದುದ್ದರಿಂದ ವರ್ಷಾಂತ್ಯವಾದ್ದರಿಂದ ಕೆಲಸದ ಒತ್ತಡದಿಂದ, 2015–16ನೇ ಕೊನೆಯಲ್ಲಿ ವಾದ್ಯಪರಿಕರಗಳನ್ನು ತರಿಸಿ ವಿತರಿಸಲಾಗಿದ್ದು, ದೂರುದಾರರು ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿದ್ದು, ತಾನು ಯಾವುದೇ ಹಣ ದುರುಪಯೋಗ ಮಾಡಿಲ್ಲವಾದ್ದರಿಂದ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೋರಿದ್ದರು.

2ನೇ ಆ.ಸ.ನೌ.ರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ತನ್ನ ವಿರುದ್ಧ ದೂರಿನಲ್ಲಿ ಯಾವುದೇ ಆಕ್ಷೇಪಣೆಗಳು ಇಲ್ಲ. ಹಣಕಾಸು ನಿರ್ವಹಣೆ ಅಥವಾ ಮಂಜೂರಾತಿ ತನ್ನ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ದೂರನ್ನು ಕೈಬಿಡುವಂತೆ ಕೋರಿಕೊಂಡಿದ್ದರು.

3ನೇ ಆ.ಸ.ನೌ.ರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಒಟ್ಟು ರೂ.5,20,000/– ಗಳ ಅನುದಾನ ಬಿಡುಗಡೆಯಾಗಿದ್ದು ವಾದ್ಯಪರಿಕರಗಳನ್ನು ತರಿಸಲು ಮಾನ್ಯತೆ ಪಡೆದ ಸಂಸ್ಥೆಗೆ ವಹಿಸಲಾಗಿತ್ತು, ಚೆಕ್‌ಗಳನ್ನು ಸಹ ವಿತರಿಸಲಾಗಿದ್ದು, ಚುನಾವಣೆ, ಇತರೇ ಕೆಲಸ, ಜಯಂತಿಗಳ ಒತ್ತಡದಿಂದ ತರಿಸಿಟ್ಟ ವಾದ್ಯಗಳನ್ನು ವಿತರಿಸಲು ಸಾಧ್ಯವಾಗಿಲ್ಲ. 2015–16 ರಲ್ಲಿ ವಾದ್ಯಪರಿಕರಗಳನ್ನು ವಿತರಿಸಲಾಗಿದ್ದು, ತಾನು ಯಾವುದೇ ಹಣವನ್ನು ದುರುಪಯೋಗ ಮಾಡಿಕೊಂಡಿಲ್ಲ ಹಾಗೂ ನಿಯಮಾನುಸಾರ ಕರ್ತವ್ಯವನ್ನು ನಿರ್ವಹಿಸಿರುವುದಾಗಿ ತಿಳಿಸಿದ್ದರು. ಆದರೆ, 1 ರಿಂದ 3ನೇ ಆ.ಸ.ನೌ.ರರು ನೀಡಿರುವ ಆಕ್ಷೇಪಣೆಗಳಲ್ಲಿನ ಸಂಗತಿಗಳು ಪ್ರಕರಣವನ್ನು ಕೈಬಿಡಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಎಂದು ಅಭಿಪ್ರಾಯಕ್ಕೆ ಬರಲಾಗಿತ್ತು.

ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಕೇವಲ 2012–13 ಮತ್ತು 2013–14 ಸಾಲಿನ ಹಣವನ್ನು ಆಯಾ ವರ್ಷವೇ ವಿತರಣೆ ಮಾಡಿಲ್ಲ, ದಿ:7–6–2016ರ ನಂತರ ವಿತರಣೆ

ಮಾಡಿದ್ದು, ಇದು ಸ್ಪಷ್ಟವಾದ ಅಧಿಕಾರ ದುರುಪಯೋಗವಾಗಿದೆ. 2014-15 ಮತ್ತು 2015-2016 ಎರಡು ವರ್ಷಗಳ ಮಾಹಿತಿ ನೀಡದೇ ಇದ್ದು, ಒಟ್ಟು ಮೊತ್ತ ರೂ.5,20,000/- ಮತ್ತು ರೂ.1,20,000/- ಗಳು ಅಂತ ಹೇಳುತಿದ್ದು, ಇಷ್ಟು ಅಪಾರ ಮೊತ್ತದ ಹಣವನ್ನು ಟೆಂಡರ್ ಕರೆಯದೆ ಬಹಿರಂಗವಾಗಿ ಯಾವುದೇ ಟೆಂಡರ್‌ನಲ್ಲಿ ಅನುಮೊದನೆ ಮಾಡದೆ ಕರ್ತವ್ಯಲೋಪವೆಸಗಿದ್ದಾರೆ. ಯಾವ ದಿನಾಂಕಗಳಂದು ಖಜಾನೆಯ ಚೆಕ್‌ನ್ನು ನೇರವಾಗಿ ವಿತರಕರಿಗೆ ಕೊಡಲಾಗಿದೆ ಎನ್ನುವುದನ್ನು ಸಹ ನಮೂದಿಸಿಲ್ಲ. ಆ.ಸ.ನೌ.ರರ ಆಪ್ತರಿಗೆ ಮಾತ್ರ ವಾಧ್ಯಪರಿಕರಗಳನ್ನು ವಿತರಣೆ ಮಾಡಿದ್ದಾರೆ. ಆದ್ದರಿಂದ, ಆ.ಸ.ನೌ.ರರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿದ್ದರು.

ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ 1 ರಿಂದ 3ನೇ ಆ.ಸ.ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ 1 ರಿಂದ 3ನೇ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ 1 ರಿಂದ 3ನೇ ಆ.ಸ.ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ 1 ರಿಂದ 3ನೇ ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ 1 ರಿಂದ 3ನೇ ಆ.ಸ.ನೌ.ರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ

ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು 1 ರಿಂದ 3ನೇ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ-2ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ-1 ರಿಂದ 3 ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ-2 ಮತ್ತು 3 ರವರು ದಿನಾಂಕ: 03/08/2018 ರಂದು ಹಾಜರಾಗಿರುತ್ತಾರೆ. **ಈ ಹಂತದಲ್ಲಿ ಆ.ಸ.ನೌ-1 ಶ್ರೀ. ಮೂರ್ತ್ಯಪ್ಪ ರವರು ಮೃತಪಟ್ಟಿದ್ದು ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ, ಆ.ಸ.ನೌ-1 ರವರ ವಿರುದ್ಧ ಈ ವಿಚಾರಣೆ 'ಇಲ್ಲ' [Abated] ಎಂದು ತೆಗೆದುಕೊಳ್ಳಲಾಗಿರುತ್ತದೆ.** ಆ.ಸ.ನೌ-2 ಮತ್ತು 3 ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ-2 ಮತ್ತು 3 ರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌ-2 ಮತ್ತು 3 ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ-1 ರಿಂದ 3 ರವರಿಂದ ರಕ್ಷಣಾ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌ-1 ರವರು ತಮ್ಮ ಆಕ್ಷೇಪಣೆಯಲ್ಲಿ, 2012-13 ಮತ್ತು 2013-14ನೇ ಸಾಲಿನಲ್ಲಿ 5,20,000/- ರೂ.ಗಳಿಗೆ ಎಸ್.ಸಿ.ಪಿ ಕಲಾ ತಂಡಗಳಿಗೆ ವಾದ್ಯಪರಿಕರಗಳನ್ನು ವಿತರಿಸಲು ಹಣ ಬಿಡುಗಡೆಯಾಗಿದ್ದು, ಉತ್ತಮ ಗುಣಮಟ್ಟದ ವಾಧ್ಯಪರಿಕರಗಳನ್ನು ವಿತರಿಸಲು ಸದರಿ ಸಾಲಿನಲ್ಲಿ ಖಜಾನೆಯ ಚೆಕ್ ಮೂಲಕ ನೇರವಾಗಿ ವಿತರಿಸುವ ಸಂಸ್ಥೆಗೆ ಪಾವತಿಸಲಾಗಿದ್ದು, 2012-13ನೇ

ಸಾಲಿನ ಎಸ್.ಟಿ.ಪಿ ಗಿರಿಜನ ಉಪಯೋಜನೆ ಅಡಿಯಲ್ಲಿ 1,20,000/- ರೂ.ಗಳಿಗೆ ಉತ್ತಮ ಗುಣಮಟ್ಟದ ವಾದ್ಯಪರಿಕರಗಳನ್ನು ವಿತರಿಸಲು ಸದರಿ ಸಾಲಿನಲ್ಲಿ ಖಜಾನೆ ಚೆಕ್ ಮೂಲಕ ನೇರವಾಗಿ ವಿತರಣಾ ಸಂಸ್ಥೆಗೆ ಪಾವತಿಸಲಾಗಿದ್ದು, ಒಟ್ಟು 27 ತಂಡಗಳಿಗೆ ಮತ್ತು ಉಪ ಯೋಜನೆಯಡಿಯಲ್ಲಿ 7 ತಂಡಗಳಿಗೆ ವಾದ್ಯಪರಿಕರಗಳನ್ನು ವಿತರಣೆ ಮಾಡಲಾಗಿದೆ. ಉತ್ತಮ ರೀತಿಯ ಮತ್ತು ಗುಣಮಟ್ಟದ ವಾದ್ಯಪರಿಕರಗಳನ್ನು ವಿತರಿಸಲು ಆದೇಶ ಇದ್ದುದ್ದರಿಂದ ವರ್ಷಾಂತ್ಯವಾದ್ದರಿಂದ ಕೆಲಸದ ಒತ್ತಡದಿಂದ, 2015-16ನೇ ಕೊನೆಯಲ್ಲಿ ವಾದ್ಯಪರಿಕರಗಳನ್ನು ತರಿಸಿ ವಿತರಿಸಲಾಗಿದ್ದು, ದೂರುದಾರರು ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿದ್ದು, ತಾನು ಯಾವುದೇ ಹಣ ದುರುಪಯೋಗ ಮಾಡಿಲ್ಲವಾದ್ದರಿಂದ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೋರಿದ್ದರು.

8. ಆ.ಸ.ನೌ-2 ರವರು ತಮ್ಮ ಆಕ್ಷೇಪಣೆಯಲ್ಲಿ, ದೂರುದಾರರು ಸಲ್ಲಿಸಿರುವ ಲಿಖಿತ ದೂರಿನಲ್ಲಿ ತನ್ನ ವಿರುದ್ಧ ಯಾವುದೇ ಆರೋಪಗಳನ್ನು ಮಾಡಿರುವುದಿಲ್ಲ. ಹಣಕಾಸು ನಿರ್ವಹಣೆ ಅಥವಾ ಮಂಜೂರಾತಿ ತನ್ನ ವ್ಯಾಪ್ತಿಗೆ ಬರುತ್ತಿರಲಿಲ್ಲ. ಆದ್ದರಿಂದ, ದೂರಿನಿಂದ ತನ್ನನ್ನು ಕೈಬಿಡಬೇಕೆಂದು ಕೋರಿದ್ದರು.

9. ಆ.ಸ.ನೌ-3 ರವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಒಟ್ಟು ರೂ.5,20,000/- ಗಳ ಅನುದಾನ ಬಿಡುಗಡೆಯಾಗಿದ್ದು ವಾದ್ಯಪರಿಕರಗಳನ್ನು ತರಿಸಲು ಮಾನ್ಯತೆ ಪಡೆದ ಸಂಸ್ಥೆಗೆ ವಹಿಸಲಾಗಿತ್ತು, ಚೆಕ್‌ಗಳನ್ನು ಸಹ ವಿತರಿಸಲಾಗಿದ್ದು, ಚುನಾವಣೆ, ಇತರೇ ಕೆಲಸ, ಜಯಂತಿಗಳ ಒತ್ತಡದಿಂದ ತರಿಸಿಟ್ಟ ವಾದ್ಯಗಳನ್ನು ವಿತರಿಸಲು ಸಾಧ್ಯವಾಗಿಲ್ಲ. 2015-16 ರಲ್ಲಿ ವಾದ್ಯಪರಿಕರಗಳನ್ನು ವಿತರಿಸಲಾಗಿದ್ದು, ತಾನು ಯಾವುದೇ ಹಣವನ್ನು ದುರುಪಯೋಗ ಮಾಡಿಕೊಂಡಿಲ್ಲ ಹಾಗೂ ನಿಯಮಾನುಸಾರ ಕರ್ತವ್ಯವನ್ನು ನಿರ್ವಹಿಸಿರುವುದಾಗಿ ತಿಳಿಸಿದ್ದರು.

10. ಆ.ಸ.ನೌ–1 ರವರು ಮೃತಪಟ್ಟಿದ್ದರಿಂದ, ಸದರಿಯವರು ತಮ್ಮ ಲಿಖಿತ ಹೇಳಿಕೆಯನ್ನು (written statement) ಈ ಪ್ರಾಧಿಕಾರದ ಮುಂದೆ ಸಲ್ಲಿಸಿರುವುದಿಲ್ಲ. ಆ.ಸ.ನೌ–2 ರವರಿಗೆ ಸಾಕಷ್ಟು ಕಾಲಾವಕಾಶವನ್ನು ನೀಡಿದರೂ ಸಹ ಅವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆ.ಸ.ನೌ–3 ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ದೂರುದಾರರಾದ ಶ್ರೀ. ವೈ.ಎಸ್ ಶಾಂತಕುಮಾರ್ ರವರು ದಿನಾಂಕ: 27/05/2016 ರಂದು ಹಾಸನ ಜಿಲ್ಲಾಧಿಕಾರಿಗಳಿಗೂ ಸಹ ದೂರನ್ನು ಸಲ್ಲಿಸಿದ್ದರು. ಜಿಲ್ಲಾಧಿಕಾರಿಗಳ ಆದೇಶದಂತೆ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ರವರು ದಿನಾಂಕ: 26/07/2016 ರಂದು ಒಂದು ವರದಿಯನ್ನು ಸಲ್ಲಿಸಿ, ಅದರಲ್ಲಿ ತಾನು ಯಾವುದೇ ಲೋಪ ಎಸಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಅಲ್ಲದೇ, ದಿನಾಂಕ: 26/10/2018 ರಂದು ಉಪವಿಭಾಗಾಧಿಕಾರಿಗಳು, ಹಾಸನ ಉಪವಿಭಾಗ ರವರು ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿ ತಾನು ಯಾವುದೇ ರೀತಿಯ ಕರ್ತವ್ಯ ಲೋಪ ಎಸಗಿರುವುದಿಲ್ಲ ಎಂದು ತಿಳಿಸಿ ತನ್ನ ವಿರುದ್ಧ ದೂರುದಾರರು ಮಾಡಲಾದ 7 ಆಪಾದನೆಗಳಿಗೆ ಸಂಬಂಧಿಸಿದಂತೆ, ಆರೋಪಗಳಿಂದ ಕೈಬಿಡಬಹುದಾಗಿರುತ್ತದೆ ಎನ್ನುವ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ತಾನು ಈ ಪ್ರಕರಣದಲ್ಲಿ ಯಾವುದೇ ರೀತಿ ಕರ್ತವ್ಯ ಲೋಪ ಮತ್ತು ಕರ್ತವ್ಯ ಚ್ಯುತಿ ಎಸಗಿರುವುದಿಲ್ಲ. ಆದ್ದರಿಂದ, ತನ್ನನ್ನು ಈ ಪ್ರಕರಣದಿಂದ ಮುಕ್ತಗೊಳಿಸಬೇಕಾಗಿ ಕೇಳಿರುತ್ತಾರೆ.

11. ಈ ವಿಚಾರಣೆಯಲ್ಲಿ, ಆ.ಸ.ನೌ–2 ಮತ್ತು 3 ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು **ಪಿ.ಡಬ್ಲ್ಯೂ.1** ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 4 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ–2 ಮತ್ತು 3 ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ತದನಂತರ, ಆ.ಸ.ನೌ–3 ರವರು ಡಿ.ಡಬ್ಲ್ಯೂ.1, ಎಂದು ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ ಮತ್ತು ನಿ.ಡಿ.1 ರಿಂದ ನಿ.ಡಿ.3 ರವರೆಗಿನ ದಾಖಲಾತಿಗಳನ್ನು ತಮ್ಮ ಪರವಾಗಿ ಗುರುತುಪಡಿಸಿಕೊಂಡಿರುತ್ತಾರೆ

12. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು.

13. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–2 ಮತ್ತು 3 ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

14. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

15. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1:** ಆ.ಸ.ನೌ–1 ರವರ ವಿರುದ್ಧ ಈ ಪ್ರಕರಣ **'ಇಲ್ಲ'** ಎಂದು ತೆಗೆದುಕೊಳ್ಳಲಾಗಿದೆ.

ಆ.ಸ.ನೌ–2 ಮತ್ತು 3 ರವರ ವಿರುದ್ಧ **"ನಕಾರಾತ್ಮಕವಾಗಿ"**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

16. ಈ ಪ್ರಕರಣದಲ್ಲಿ ಆ.ಸ.ನೌ–2 ಮತ್ತು 3 ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ **ಶ್ರೀ. ವೈ.ಎಸ್ ಶಾಂತಕುಮಾರ** ಬಿನ್ ಲೇಟ್ ಸಿದ್ದರಾಮೇಗೌಡ, ರಂಗಭೂಮಿ ಕಲಾವಿಧರು, ನಂ.272, ಮಂಜುನಾಥ ನಿಲಯ, 1ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ಶಾಂತಿನಗರ, ಹಾಸನ ರವರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ನುಡಿಸಿಕೊಂಡಿರುತ್ತಾರೆ. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ **"ನಾನು ಈ ದೂರನ್ನು ನೀಡಿರುವುದು ಒಂದನೇ ಆಸನೌ ಮೂರ್ತ್ಯಪ್ಪ ಮತ್ತು**

ಮೂರನೇ ಆಸನೌ ಕುಮಾರರವರ ವಿರುದ್ಧ ಮಾಡಿದ್ದೇನೆ. ಮಂಜುನಾಥ ವಿರುದ್ಧ ಮಾಡಿರಲಿಲ್ಲ. 2012–13ನೇ ಸಾಲಿನಿಂದ 2015–16ನೇ ಸಾಲಿನವರೆಗೆ ವಾದ್ಯ ಪರಿಕರಗಳನ್ನು ವಿತರಿಸುವ ಬಾಬ್ತು ಸರ್ಕಾರ ಅನುಧಾನವನ್ನು ಬಿಡುಗಡೆ ಮಾಡಿತ್ತು. ಆದರೆ ಆ ಅನುಧಾನದಲ್ಲಿ ವಾದ್ಯ ಪರಿಕರಗಳನ್ನು ಖರೀದಿ ಮಾಡಿ ಕಲಾವಿದರಿಗೆ ಆಸನೌರವರುಗಳು ಹಂಚಬೇಕಾಗಿತ್ತು. 2012–13ರನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಒಂದು ಲಕ್ಷದ ಇಪ್ಪತ್ತುಸಾವಿರ ರೂ. ಅನುಧಾನ ಬಿಡುಗಡೆಯಾಗಿತ್ತು. ಇದೇ ಯೋಜನೆಯ ಅಡಿಯಲ್ಲಿ 2013–14ನೇ ಸಾಲಿನಲ್ಲಿ ನಾಲ್ಕು ಲಕ್ಷ ರೂ. ಅನುಧಾನ ಬಿಡುಗಡೆಯಾಗಿತ್ತು. ಗಿರಿಜನ ಉಪ ಯೋಜನೆಯ ಅಡಿಯಲ್ಲಿ 2012–13ನೇ ಸಾಲಿನಲ್ಲಿ ಒಂದು ಲಕ್ಷದ ಇಪ್ಪತ್ತುಸಾವಿರ ರೂ. ಅನುಧಾನ ಬಿಡುಗಡೆಯಾಗಿತ್ತು ಮತ್ತು ಇದೇ ಯೋಜನೆಯ ಅಡಿಯಲ್ಲಿ 2013–14ನೇ ಸಾಲಿನಲ್ಲಿ ಒಂದು ಲಕ್ಷದ ಇಪ್ಪತ್ತುಸಾವಿರ ರೂ. ಅನುಧಾನ ಬಿಡುಗಡೆಯಾಗಿತ್ತು. 2014ರಿಂದ 2016ರವರೆಗಿನ ಸಾಲಿನ ಅನುಧಾನದ ಬಾಬ್ತು ನಮಗೆ ಆಸನೌರವರುಗಳು ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಮೇಲೆ ಹೇಳಿದ ಅನುಧಾನದ ಹಣದ ಬಾಬ್ತು ಟೆಂಡರ್ ಕರೆಯದೆ, ಪತ್ರಿಕೆಯಲ್ಲಿ ಪ್ರಕಟಣೆಯನ್ನು ಮಾಡದೆ, ಯಾವ ಸಂಸ್ಥೆಗೆ ಗುತ್ತಿಗೆಯನ್ನು ನೀಡಲಾಗಿದೆ ಎನ್ನುವ ಬಗ್ಗೆ ನಮಗೆ ಮಾಹಿತಿಯನ್ನೂ ಸಹಾ ನೀಡದೆ, ಯಾವುದೇ ಸಮಾರಂಭವನ್ನು ನಡೆಸದೆ ಗೌಪ್ಯವಾಗಿ ವಾದ್ಯ ಪರಿಕರಗಳನ್ನು 2016ನೇ ಸಾಲಿನಲ್ಲಿ ವಿತರಿಸಿರುತ್ತಾರೆ. ಸರ್ಕಾರದ ನಿಯಮಾವಳಿಯ ಪ್ರಕಾರ ಸರ್ಕಾರ ಅನುಧಾನ ಬಿಡುಗಡೆ ಮಾಡಿದ ವರ್ಷದಲ್ಲೇ ಕಲಾವಿದರಿಗೆ ವಾದ್ಯ ಪರಿಕರಗಳನ್ನು ಹಂಚಬೇಕು. ಆದರೆ ಆಸನೌರವರುಗಳು ಇದನ್ನು ಮಾಡಿಲ್ಲ. ಮೂರು ವರ್ಷಗಳ ಕಾಲ ಅನುಧಾನದ ಹಣವನ್ನು ಇಟ್ಟುಕೊಂಡು, ನಾನು ಮಾಹಿತಿಯನ್ನು ಕೇಳಿದ ನಂತರ, ಗೌಪ್ಯವಾಗಿ ಪರಿಕರಗಳನ್ನು ವಿತರಿಸಿರುವುದನ್ನು ನೋಡಿದಲ್ಲಿ, ಆಸನೌರವರುಗಳು 7,60,000/– ರೂ.ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎನ್ನುವುದು ಕಂಡುಬರುತ್ತದೆ. ಗೌಪ್ಯವಾಗಿ ಕೊಟ್ಟಿರುವಂತಹ ವಾದ್ಯ ಪರಿಕರಗಳು ಸಹಾ ಉತ್ತಮ ಗುಣಮಟ್ಟದ್ದಾಗಿರಲಿಲ್ಲ. ಈ ಬಗ್ಗೆ ಆಸನೌರವರುಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ" ಎಂದು ನುಡಿದಿರುತ್ತಾರೆ.

17. ದೂರನ್ನು ನಿ.ಪಿ.1 ಎಂತಲೂ, ನಮೂನೆ–1 ಮತ್ತು 2ನ್ನು ನಿ.ಪಿ.2 ಮತ್ತು 3 ಎಂತಲೂ, ದೂರುದಾರ ಮಾಹಿತಿ ಹಕ್ಕಿನ ಅಡಿಯಲ್ಲಿ ಪಡೆದಂತಹ ದಾಖಲಾತಿಯನ್ನು ನಿ.ಪಿ.4 ಎಂತಲೂ ಗುರುತುಪಡಿಸಿಕೊಳ್ಳಲಾಗಿದೆ.

18. ದೂರನ್ನು ಪರಿಶೀಲಿಸಲಾಗಿ, ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ, ಸಹಾಯಕ ನಿರ್ದೇಶಕ ಶ್ರೀ. ಮೂರ್ತ್ಯಯಪ್ಪ ಅಂದರೆ ಆ.ಸ.ನೌ–1 ಮತ್ತು ಪ್ರ.ದ.ಸ ಶ್ರೀ. ಕುಮಾರ್ ಅಂದರೆ ಆ.ಸ.ನೌ–3 ರವರ ವಿರುದ್ಧ ಮಾತ್ರವೇ ಆಪಾದನೆ ಮಾಡಲಾಗಿದೆ.

19. ನಿ.ಪಿ.4 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಿದ ಮಾಹಿತಿಯನ್ನು ಪರಿಶೀಲಿಸಲಾಗಿ, 2012–13ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ವಾದ್ಯ ಪರಿಕರಗಳನ್ನು ವಿತರಣೆ ಮಾಡಲು ರೂ.1,20,000/– ಮತ್ತು 2013–14ನೇ ಸಾಲಿನಲ್ಲಿ ರೂ.4,00,000/– ಅನುದಾನ ಬಿಡುಗಡೆಯಾಗಿರುತ್ತದೆ. ಹಣ ಬಿಡುಗಡೆಯಾಗಿದ್ದರೂ ಸಹ ಕಲಾವಿಧರಿಗೆ ವಾದ್ಯ ಪರಿಕರಗಳನ್ನು ವಿತರಣೆ ಮಾಡದೇ ದುರುಪಯೋಗ ಪಡಿಸಿಕೊಂಡಿರುತ್ತಾರೆ ಎನ್ನುವುದು ದೂರುದಾರರ ಆಪಾದನೆ.

20. ಆ.ಸ.ನೌ–1 ರವರು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ, ಆ.ಸ.ನೌ–2 ರವರು ನಿವೃತ್ತ ದ್ವಿ.ದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ಮತ್ತು ಆ.ಸ.ನೌ–3 ರವರು ಪ್ರ.ದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನಾಂಬ ಕಲಾಕ್ಷೇತ್ರ, ಸಾಲಗಾಮೆ ರಸ್ತೆ, ಹಾಸನ ರವರಾಗಿರುತ್ತಾರೆ. ಈ ಪ್ರಕರಣ ದಾಖಲಾದ ನಂತರದಲ್ಲಿ ಆ.ಸ.ನೌ–1 ರವರು ಮೃತಪಟ್ಟಿರುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಆ.ಸ.ನೌ–2 ರವರು ಸದರಿ ಕಛೇರಿಯ ದ್ವಿತೀಯ ದರ್ಜೆ ಸಹಾಯಕರಾಗಿದ್ದು, ಆ.ಸ.ನೌ–3 ರವರು ಸದರಿ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿದ್ದವರು.

21. ಆ.ಸ.ನೌ–1 ರವರ ಮೇಲೆ ಮಾಡಲಾಗಿರುವ ದೋಷಾರೋಪಣೆ ಏನೆಂದರೆ, 'ವಾದ್ಯಪರಿಕರಗಳನ್ನು ವಿತರಿಸುವ ಸಂಬಂಧ ಆಯಾ ವರ್ಷದ ಅನುದಾನವನ್ನು ಅದೇ ವರ್ಷ ಬಹಿರಂಗವಾಗಿ ಟೆಂಡರ್ ಕರೆದು ಕೆ.ಟಿ.ಪಿ.ಪಿ. ಕಾನೂನಿನ ಅಡಿಯಲ್ಲಿ ಕರ್ತವ್ಯ ನಿರ್ವಹಿಸದೇ ನೇರವಾಗಿ ವಿತರಕರಿಗೆ ಚೆಕ್‌ಗಳನ್ನು ಕೊಟ್ಟು ಕರ್ತವ್ಯಲೋಪ ಎಸಗಿರುತ್ತಾರೆ ಮತ್ತು ಒಂದು ಬಾರಿ ರೂ.5,20,000/– ಮತ್ತು ರೂ.1,20,000/– ಗಳು ಅನುದಾನ ರೂಪದಲ್ಲಿ ಬಿಡುಗಡೆಯಾಗಿದ್ದು, ಇಷ್ಟು ದೊಡ್ಡ ಮೊತ್ತದ ಹಣಕ್ಕೆ ಯಾವುದೇ ಟೆಂಡರ್‌ಗಳನ್ನು ಕರೆಯದೇ ವಾಧ್ಯಪರಿಕರಗಳನ್ನು ನೇರವಾಗಿ ಖರೀದಿಸಿರುತ್ತಾರೆ' ಎಂದು.

22. ಆ.ಸ.ನೌ–1 ರಿಂದ 3 ರವರ ಮೇಲೆ ಮಾಡಲಾಗಿರುವ ದೋಷಾರೋಪಣೆ ಏನೆಂದರೆ, 'ಯಾವ ವಾದ್ಯ ಪರಿಕರಗಳನ್ನು ಎಷ್ಟು ಹಣಕ್ಕೆ ಖರೀದಿಸಲಾಗಿದೆ, ಯಾವ ವಾದ್ಯ ಪರಿಕರಗಳ ಸಂಸ್ಥೆಗೆ ಎಷ್ಟು ಹಣವನ್ನು ಚೆಕ್ ಮೂಲಕ ಕೊಡಲಾಗಿದೆ, ಅವರಿಂದ ವಾದ್ಯಗಳನ್ನು ಯಾವ ದಿನಾಂಕದಂದು ಖರೀದಿಸಲಾಗಿದೆ ಎಂಬ ಬಗ್ಗೆ ವಿವರಗಳನ್ನು ನೀಡಿರುವುದಿಲ್ಲ' ಎಂದು.

23. ಇಲ್ಲಿ ಆ.ಸ.ನೌ–1 ರವರು ಮೃತಪಟ್ಟಿರುತ್ತಾರೆ. ಆದ್ದರಿಂದ ಪ್ರಸ್ತುತ ಪ್ರಕರಣವನ್ನು ಅವರ ವಿರುದ್ಧ "ಇಲ್ಲ" **(Abated)** ಎಂದು ತೆಗೆದುಕೊಳ್ಳಲಾಗಿದೆ. ಇನ್ನು ಆ.ಸ.ನೌ–2 ರವರು ದ್ವಿತೀಯ ದರ್ಜೆ ಸಹಾಯಕರಾಗಿದ್ದು, ಸದರಿಯವರಿಗೆ ಸಂಬಂಧಪಟ್ಟಂತೆ, ಖುದ್ದು ದೂರುದಾರರು ತಮ್ಮ ಪಾಟಿ ಸವಾಲಿನಲ್ಲಿ "2012ನೇ ಸಾಲಿನಿಂದ ಆಸನೌ–2 ರವರು ಆ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಏಕೆಂದರೆ ಅವರಿಗೆ ವರ್ಗಾವಣೆಯಾಗಿತ್ತು" ಎಂದು ನುಡಿದಿರುತ್ತಾರೆ. ಅಲ್ಲದೇ, ದೂರುದಾರರು ನೀಡಿರುವ ದೂರಿನಲ್ಲಿ ಈ ಆ.ಸ.ನೌ–2 ರವರ ಹೆಸರು ಇರುವುದಿಲ್ಲ. ಅಲ್ಲದೇ, ಮಾಡಿರುವ ಆರೋಪ, 2012 ರಿಂದ 2016ನೇ ಸಾಲಿನ ವರೆಗೆ ಅನುದಾನ ಬಿಡುಗಡೆ ಆಗಿದ್ದರೂ ಸಹ ವಾದ್ಯ ಪರಿಕರಗಳನ್ನು ಖರೀದಿಸಿ ಕಲಾವಿಧರಿಗೆ ಹಂಚಿರುವುದಿಲ್ಲ ಎಂದು. ಆದರೆ, ಈ ಆ.ಸ.ನೌ–2, ಆ ವರ್ಷಗಳಲ್ಲಿ ಅಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲ. ಅಲ್ಲದೇ, ವಾದ್ಯ ಪರಿಕರಗಳನ್ನು ವಿತರಿಸುವ ಸಂಬಂಧ ಕೆ.ಟಿ.ಪಿ.ಪಿ ಕಾನೂನಿನ ಅಡಿಯಲ್ಲಿ ಟೆಂಡರ್ ಕರೆಯುವುದು, ವಾದ್ಯ ಪರಿಕರಗಳನ್ನು ನೇರವಾಗಿ

ಖರೀದಿಸಿರುವುದು, ಚೆಕ್‌ಗಳನ್ನು ಕೊಟ್ಟಿರುವುದು ಈ ಆ.ಸ.ನೌ–2 ಆಗಿರುವುದಿಲ್ಲ. ಈ ಎಲ್ಲವುಗಳನ್ನು ಆ.ಸ.ನೌ–1 ರವರು ಮಾಡಿರುತ್ತಾರೆ. ಹೀಗಾಗಿ, ಆ.ಸ.ನೌ–2 ರವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕರ್ತವ್ಯ ಲೋಪ ಎಸಗಿರುತ್ತಾರೆ ಎನ್ನಲು ಬರುವುದಿಲ್ಲ.

24. ಆ.ಸ.ನೌ–3 ರವರು ಸಹ ಸದರಿ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿದ್ದವರು. ದೂರುದಾರರು ಈತನ ವಿರುದ್ಧ ಆಪಾದನೆ ಮಾಡಿರುತ್ತಾರೆ. ಆದರೆ, ಪಾಟಿ ಸವಾಲಿನಲ್ಲಿ ದೂರುದಾರರು **"ನಾನು ಸದರಿ ಕಚೇರಿಯಲ್ಲಿ ಜುಲೈ 2012ರಿಂದ 2016ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೆ ಎನ್ನುವುದು ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು ಆಸನೌ–1 ರವರು ಸುಪರ್ದಿಯಲ್ಲೇ ಇದ್ದವು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತ: ನುಡಿಯುತ್ತಾರೆ ಆಸನೌ–1 ಮತ್ತು ಆಸನೌ–3 ರವರು ಒಟ್ಟಿಗೆ ಸೇರಿ ಮಾಡಿರುತ್ತಾರೆ ಎನ್ನುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಆಸನೌ–1 ರವರ ಅಧಿಕಾರ ವ್ಯಾಪ್ತಿಯಲ್ಲಿದ್ದರೂ ಸಹಾ, ಈ ಬಗ್ಗೆ ತಪ್ಪಾಗಿ ಅರ್ಥೈಸಿಕೊಂಡು ನನ್ನ ವಿರುದ್ಧ ಸುಳ್ಳು ಆರೋಪವನ್ನು ಮಾಡಲಾಗಿದೆ ಎನ್ನುವುದು ಸರಿಯಲ್ಲ"** ಎಂದು ನುಡಿದಿರುತ್ತಾರೆ. ಆ.ಸ.ನೌ–3 ರವರು ಖುದ್ದು ತಮ್ಮ ಮೌಖಿಕ ಸಾಕ್ಷ್ಯವನ್ನು ನೀಡಿ, **"ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನದೇನು ತಪ್ಪಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು ಆಸನೌ–1ರವರ ಬಳಿಯಲ್ಲಿ ಇದ್ದವು. ಅವರೇ ಅವುಗಳನ್ನು ನಿರ್ವಹಿಸುತ್ತಿದ್ದರು. ವಾದ್ಯಗಳನ್ನು ಆಸನೌ–1ರವರೇ ವಿತರಿಸಿದ್ದರು. ನಾನು ನಾಲ್ಕನೇ ದರ್ಜೆ ನೌಕರನಿಂದ ದ್ವಿತೀಯ ದರ್ಜೆ ಸಹಾಯಕನಾಗಿ ಪದನ್ನೋನ್ನತಿಯನ್ನು ಹೊಂದಿದ್ದೆ. ಈ ಪ್ರಕರಣದ ಸಂದರ್ಭದಲ್ಲಿ ನಾನು ದ್ವಿ.ದ.ಸನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆಸನೌ–1ರವರು ಮಾನ್ಯ ಜಿಲ್ಲಾಧಿಕಾರಿಗಳಿಗೆ ದಿ:26–07–2016ರಂದು ನೀಡಿದ್ದ ಮಾಹಿತಿಯನ್ನು ಹಾಜರುಪಡಿಸುತ್ತಿದ್ದೇನೆ. ದಿ:15–12–2017 ರಂದು ಸಹಾಯಕ ನಿರ್ದೇಶಕರು (ಪ್ರಭಾರ) ರವರು ಹಾಸನ ಉಪ ವಿಭಾಗಾಧಿಕಾರಿಗಳಿಗೆ ನೀಡಿದ ವರದಿಯನ್ನೂ ಸಹಾ ಹಾಜರುಪಡಿಸುತ್ತಿದ್ದೇನೆ. ದಿ:26–10–2018ರಂದು ಉಪ ವಿಭಾಗಾಧಿಕಾರಿಗಳು, ಹಾಸನ ಉಪ ವಿಭಾಗ, ಹಾಸನರವರು ನನ್ನ ಮೇಲೆ ವಿಚಾರಣೆ ನಡೆಸಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿದ್ದ ವರದಿಯನ್ನು ಹಾಜರುಪಡಿಸುತ್ತಿದ್ದೇನೆ. ನಾನು ಯಾವುದೇ ರೀತಿಯ ಕರ್ತವ್ಯಲೋಪ ಕರ್ತವ್ಯ ಚ್ಯುತಿ ಎಸಗಿರುವುದಿಲ್ಲ"** ಎಂದು ನುಡಿದಿರುತ್ತಾರೆ. ಆ.ಸ.ನೌ–1 ರವರು ಮಾನ್ಯ ಜಿಲ್ಲಾಧಿಕಾರಿಗಳಿಗೆ

ದಿನಾಂಕ: 26/07/2016 ರಂದು ನೀಡಿದ್ದ ಮಾಹಿತಿಯನ್ನು ನಿ.ಡಿ.1 ಎಂತಲೂ, ದಿನಾಂಕ: 15/12/2017 ರಂದು ಸಹಾಯಕ ನಿರ್ದೇಶಕರು (ಪ್ರಭಾರ) ರವರು ಹಾಸನ ಉಪವಿಭಾಗಾಧಿಕಾರಿಗಳಿಗೆ ನೀಡಿದ್ದ ವರದಿಯನ್ನು ನಿ.ಡಿ.2 ಎಂತಲೂ ಮತ್ತು ದಿನಾಂಕ: 26/10/2018 ರಂದು ಉಪವಿಭಾಗಾಧಿಕಾರಿಗಳು, ಹಾಸನ ಉಪವಿಭಾಗ, ಹಾಸನ ರವರು ವಿಚಾರಣೆ ನಡೆಸಿ ಜಿಲ್ಲಾಧಿಕಾರಿಗಳಿಗೆ ನೀಡಿದ್ದ ವರದಿಯನ್ನು ನಿ.ಡಿ.3 ಎಂತಲೂ ಗುರುತುಪಡಿಸಿಕೊಳ್ಳಲಾಗಿದೆ.

25. ಪ್ರಸ್ತುತ ದೂರುದಾರ ಶ್ರೀ. ವೈ.ಎಸ್ ಶಾಂತಕುಮಾರ್ ನೀಡಿದ್ದ ದೂರಿನ ಮೇಲೆಯೇ ಮೇಲ್ಕಂಡ ವರದಿಗಳನ್ನು ನೀಡಲಾಗಿದೆ. ನಿ.ಡಿ.1, ಆ.ಸ.ನೌ–1 ರವರು ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿದ್ದ ವರದಿಯಾಗಿದ್ದು ಅದರಲ್ಲಿ **"ಅರ್ಜಿದಾರರು ಮಾಹಿತಿ ಹಕ್ಕಿನಲ್ಲಿ ಕೇಳಿರುವ ಮಾಹಿತಿಯ 2015–16ನೇ ವರ್ಷಾಂತ್ಯವಾಗಿದ್ದು ಕೆಲಸಗಳ ಒತ್ತಡದಿಂದ ನೀಡಲು ತಡವಾಗಿತ್ತು ನಂತರ ಮೇಲ್ಮನವಿಯಲ್ಲಿ ಕೇಳಿದ ಹಿನ್ನೆಲೆ ಸಂಬಂಧಿಸಿದ ಮಾಹಿತಿಯನ್ನು ಸಿದ್ದಪಡಿಸಿ ನಿರ್ದೇಶಕರ ಮೂಲಕವೇ ಅರ್ಜಿದಾರರಿಗೆ ನೀಡಲಾಗಿದೆ ಉಳಿದಂತೆ ಸದರಿ ಅರ್ಜಿದಾರರು ದೂರಿರುವ ವಿಷಯ ತಿರುಳಿಲ್ಲದಾಗಿದ್ದು ಹಾಗೂ ಸತ್ಯಕ್ಕೆ ದೂರವಾಗಿರುತ್ತದೆ"** ಎಂದು ತಿಳಿಸಿರುತ್ತಾರೆ. ಇನ್ನು ನಿ.ಡಿ.2, ಸಹಾಯಕ ನಿರ್ದೇಶಕರು (ಪ್ರಭಾರ) ಉಪವಿಭಾಗಾಧಿಕಾರಿಗಳಿಗೆ ದಿನಾಂಕ: 15/12/2017 ರಂದು ನೀಡಿರುವ ವರದಿಯಾಗಿದ್ದು ಅದರಲ್ಲಿ **"ಆದರೆ ಕಳೆದ ಒಂದುವರೆ ತಿಂಗಳಿಂದ ಗಮನಿಸಿರುವ ಹಾಗೆ ಈ ಕಛೇರಿಯಲ್ಲಿ ಪ್ರ.ದ.ಸ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ. ಕುಮಾರ್ ಅವರು ಕಾರ್ಯಕ್ರಮ ಅನುಷ್ಠಾನ ಹಾಗೂ ದೈನಂದಿನ ಕರ್ತವ್ಯ ನಿರ್ವಹಣೆಯನ್ನು ನಿಷ್ಠೆಯಿಂದ ಹೆಚ್ಚಿನ ಶ್ರಮವಹಿಸಿ ಮಾಡುತ್ತಿದ್ದಾರೆ. ಹಾಲಿ ಪರಿಸ್ಥಿತಿಯಲ್ಲಿ ಕುಮಾರ್ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಸನ ಕಛೇರಿಯ ಕಾರ್ಯನಿರ್ವಹಣೆಯ ಆಧಾರ ಸ್ಥಂಭವಿದ್ದಂತೆ. ನನ್ನ ಅವಧಿಯಲ್ಲಿ ಗಮನಿಸಿದಂತೆ ಕುಮಾರ್ ರವರ ಕರ್ತವ್ಯ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡುತ್ತಿದ್ದಾರೆ. ವಾದ್ಯ ಪರಿಕರ ವಿತರಣೆಗೆ ಸಂಬಂಧಿಸಿದಂತೆ ದಾಖಲೆ ಪ್ರಕಾರ ಈ ಕಛೇರಿಯಲ್ಲಿ ವಾದ್ಯ ಪರಕರಗಳನ್ನು ನಿಯಮಾನುಸಾರ ಖರೀದಿ ಸಂಸ್ಥೆಗೆ ನೇರವಾಗಿ ಹಣಸಂದಾಯ ಮಾಡಿರುತ್ತಾರೆ ಹಾಗೂ ಪರಿಕರಗಳನ್ನು ವಿತರಿಸಲಾಗಿದೆ. ಕಲಾಭವನದಲ್ಲಿ ಹಣ ಕಳ್ಳತನದ ಆರೋಪಕ್ಕೆ ಸಂಬಂಧಿಸಿದಂತೆ**

**ಪ್ರಕರಣ ಪೋಲಿಸ ಠಾಣೆಯಲ್ಲಿ ದೂರು ದಾಖಲೆಯಾಗಿ ವಿಚಾರಣೆಗೆ ಒಳಪಟ್ಟಿದೆ ಪೋಲಿಸ್ ಇಲಾಖೆಯಿಂದ ಬಿ ವರದಿ ಸಲ್ಲಿಕೆಯಾಗಿದೆ. ಕುಮಾರ್ ರವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರ ಆದೇಶದಂತೆ ನಿಯೋಜನೆ ಮೇರೆಗೆ ಹಾಸನದ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಅವರ ಸೇವೆ ಈ ಕಛೇರಿಗೆ ಅನಿವಾರ್ಯವಾಗಿದೆ ಅವರ ಹೊರತು ಬೇರೆ ಯಾರು ಈ ಕಛೇರಿಯಲ್ಲಿ ಇಲಾಖಾ ಕಾರ್ಯನಿರ್ವಹಣೆಗೆ ಕಾಯಂ ಸಿಬ್ಬಂದಿಗಳಿರುವುದಿಲ್ಲ ಎಂಬ ಮಾಹಿತಿಯನ್ನು ತಮ್ಮ ಅವಗಹನೆಗೆ ತರಬಯಸುತ್ತೇನೆ"** ಎಂದು ತಿಳಿಸಿರುತ್ತಾರೆ. ಪ್ರಭಾರ ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಸನ ರವರೂ ಸಹ ಈ ಆ.ಸ.ನೌ–3 ರವರ ವಿರುದ್ಧ ತಮ್ಮ ವರದಿಯಲ್ಲಿ ನಕಾರಾತ್ಮಕವಾದ ಯಾವುದೇ ಅಂಶಗಳನ್ನು ತಿಳಿಸಿರುವುದಿಲ್ಲ. ಉಳಿದಂತೆ, ನಿ.ಡಿ.3 ಪ್ರಸ್ತುತ ದೂರುದಾರ ನೀಡಿದ್ದ ದೂರಿನ ಬಾಬ್ತು ಉಪವಿಭಾಗಾಧಿಕಾರಿಗಳು, ಹಾಸನ ಉಪವಿಭಾಗ, ಹಾಸನ ರವರು ವಿಚಾರಣೆ ಕೈಗೊಂಡಿದ್ದು, ವಿಚಾರಣೆ ನಡೆಸಿ ದಿನಾಂಕ: 26/10/2018 ರಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿ **"ಶ್ರೀ. ಕುಮಾರ್ ರವರ ವಿರುದ್ಧದ ಆರೋಪಗಳಿಂದ ಅವರನ್ನು ಕೈಬಿಡಬಹುದಾಗಿರುತ್ತದೆ"** ಎಂದು ಅಭಿಪ್ರಾಯಪಟ್ಟಿರುತ್ತಾರೆ.

26. ಆ.ಸ.ನೌ–3 ರವರು ಹಾಜರುಪಡಿಸಿದ ಮೇಲ್ಕಂಡ ನಿ.ಡಿ.1 ರಿಂದ 3 ರವರೆಗಿನ ವರದಿಗಳಲ್ಲಿ ಅವರ ವಿರುದ್ಧ ಸಂಬಂಧಪಟ್ಟ ಮೇಲಾಧಿಕಾರಿಗಳು ನಕಾರಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ.

27. ಪ್ರಸ್ತುತ ದೋಷಾರೋಪಣೆಗೆ ಸಂಬಂಧಪಟ್ಟಂತೆ, ಕೆ.ಟಿ.ಪಿ.ಪಿ ಕಾನೂನಿನ ಅಡಿಯಲ್ಲಿ ಟೆಂಡರ್ ಕರೆಯದೇ ಇರುವುದು ಆ.ಸ.ನೌ–1 ರವರು ಕರ್ತವ್ಯ ಲೋಪವಾಗಿರುತ್ತದೆ. ಟೆಂಡರ್ ಕರೆಯದೇ ವಾದ್ಯ ಪರಿಕರಗಳನ್ನು ನೇರವಾಗಿ ಖರೀದಿಸಿರುವುದು ಸಹ ಆ.ಸ.ನೌ–1ರವರ ಕರ್ತವ್ಯ ಲೋಪವಾಗಿರುತ್ತದೆ. ಅಲ್ಲದೇ, ಯಾವ ವಾದ್ಯ ಪರಿಕರಗಳನ್ನು ಎಷ್ಟು ಹಣಕ್ಕೆ ಖರೀದಿಸಲಾಗಿದೆ, ಯಾವ ವಾದ್ಯ ಪರಿಕರಗಳ ಸಂಸ್ಥೆಗೆ ಎಷ್ಟು ಹಣವನ್ನು ಚೆಕ್ ಮೂಲಕ ಕೊಡಲಾಗಿದೆ, ಅವರಿಂದ ವಾದ್ಯಗಳನ್ನು ಯಾವ ದಿನಾಂಕದಂದು ಖರೀದಿಸಲಾಗಿದೆ ಎಂಬ ಬಗ್ಗೆ ವಿವರಗಳನ್ನು ನೀಡದೇ ಇರುವುದು ಸಹ ಆ.ಸ.ನೌ–1ರವರಿಗೆ ಸಂಬಂಧಪಟ್ಟ ಕರ್ತವ್ಯ ಲೋಪವಾಗಿರುತ್ತದೆ. ಆ.ಸ.ನೌ–1

ರವರು ಸಹಾಯಕ ನಿರ್ದೇಶಕರಾಗಿದ್ದು, ಅವರ ನಿರ್ದೇಶನದಂತೆ ಕರ್ತವ್ಯ ನಿರ್ವಹಿಸುವುದು ಕಛೇರಿಯ ಸಿಬ್ಬಂದಿಯ ಕೆಲಸವಾಗಿರುತ್ತದೆ. ಈ ಆ.ಸ.ನೌ–3 ಈ ಪ್ರಕರಣಕ್ಕೆ ಸಂಬಂಧಪಟ್ಟ ಸಂದರ್ಭದಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಆರೋಪಣೆಗಳಿಗೆ ಸಂಬಂಧಪಟ್ಟಂತೆ ಆತನಿಂದ ಕರ್ತವ್ಯ ಲೋಪವಾಗಿರುತ್ತದೆ ಎನ್ನಲು ಬರುವುದೇ ಇಲ್ಲ.

28. **ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–2 ಮತ್ತು 3 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎಂದು ನಿರ್ಣಯಕ್ಕೆ ಬಂದು ಅಂಶ–1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

29. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಶಿಸ್ತು ಪ್ರಾಧಿಕಾರದವರು ಆಪಾದಿತ 'ಆ.ಸ.ನೌ – (2) **ಶ್ರೀ. ಟಿ.ಸಿ ಮಂಜುನಾಥ,** ನಿವೃತ್ತ ದ್ವಿ.ದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ ಹಾಲಿ ವಾಸ ಚಿಕ್ಕಕೊಂಡಗುಳ, ತೇಜೂರು ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಮತ್ತು (3) **ಶ್ರೀ. ಕುಮಾರ್,** ಪ್ರ.ದ.ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನಾಂಬ ಕಲಾಕ್ಷೇತ್ರ, ಸಾಲಗಾಮೆ ರಸ್ತೆ, ಹಾಸನ **ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ಶಿಸ್ತುಪ್ರಾಧಿಕಾರವು ಸೂಕ್ತ ಸಾಕ್ಷ್ಯಧಾರಗಳನ್ನು ನೀಡಿ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.**

**ಆಪಾದಿತ ಸರ್ಕಾರಿ ನೌಕರ–1** ಶ್ರೀ. **ಮೂರ್ತ್ಯಪ್ಪ,** ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಸನ **ರವರು ವಿಚಾರಣಾ ಅವಧಿಯಲ್ಲಿ ಮೃತಪಟ್ಟಿದ್ದರಿಂದ, ಅವರ ವಿರುದ್ಧ ಈ ವಿಚಾರಣೆ "ಇಲ್ಲ" ಎಂದು ಪರಿಗಣಿಸಲಾಗಿದೆ ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಕೋರಿದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

28/1/21

**(ಕೆ.ಭಾಗ್ಯ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Shanthakumar Y.S S/o Siddaramegowda Y.K, Drama Artist, Hassan. |
| 2 | **Documents marked on behalf of the Disciplinary Authority Ex.P-1 to Ex.P-4** | |
| | **Ex.P.1 & 1(a)** | Complaint given by the complainant to this institution with Signature dtd: 11/05/2016. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Letter dtd: 07/05/2014 given by Assistant Director, Kannada & Culture Dept., Hassa - Information secured from RTI Act. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Kumar S/o Thippeswamy, FDA, Kannada & Culture Dept., Kannada Bhavan, Bengaluru. |
| 4 | **Documents marked on behalf of the DGOs through the complainant** | |
| | **Ex.D.1** | Letter dtd: 26/07/2016 addressed by Assistant Director, Kannada & Culture Dept., Hassan to DC, Hassan. |

| | | |
|---|---|---|
| | **Ex.D.2** | Letter dtd: 15/12/2017 addressed by I/c Assistant Director, Kannada & Culture Dept., Hassan to AC, Hassan Sub-Division, Hassan. |
| | **Ex.D.3** | Report dtd: 26/10/2018 submitted by AC, Hassan Sub-Division, Hassan to DC, Hassan. |

Dated this the 27th January, 2021

27/1/21

**(K.BHAGYA)**
Additional Registrar Enquiries-14,
Karnataka Lokayukta,
Bangalore.